# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :793 |
| 2. | ವಿಧಾನ ಪರಿಷತ್ತಿನ ಸದಸ್ಯರ ಹೆಸರು | :ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | :18.08.2025 |
| 4. | ಉತ್ತರಿಸುವ ಸಚಿವರು | :ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ, ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 03 ವರ್ಷಗಳಿಂದ ಇಲ್ಲಿಯವರೆಗೂ ಗ್ರಾಹಕರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿದೆ; ಎಷ್ಟು ಬಾಕಿ ಉಳಿದಿದೆ; | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ 2023 ನೇ ಸಾಲಿನಿಂದ ಜೂನ್ 2025 ರ ಅಂತ್ಯದವರೆಗೆ ದಾಖಲಾಗಿರುವ ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಗ್ರಾಹಕರ ನ್ಯಾಯಾಲಯಗಳಿಂದ ಗ್ರಾಹಕರ ಪರವಾಗಿ ಆದೇಶ ಮಾಡಿರುವ ಎಲ್ಲಾ ಪ್ರಕರಣಗಳು ಜಾರಿಯಾಗಿದೆಯೇ; | ಗ್ರಾಹಕರ ನ್ಯಾಯಾಲಯಗಳಲ್ಲಿ ಗ್ರಾಹಕರ ಪರ ಆದೇಶ ವಾಗಿರುವ ಪ್ರಕರಣಗಳಲ್ಲಿ ಆದೇಶವು ಜಾರಿಯಾದ ಬಗ್ಗೆ ಪಕ್ಷಕಾರರು ಗ್ರಾಹಕ ಆಯೋಗಕ್ಕೆ ಮಾಹಿತಿ ನೀಡದ ಹೊರತು ಎಲ್ಲಾ ಆದೇಶಗಳು ಜಾರಿಯಾಗಿವೆ ಎಂಬುದರ ಬಗ್ಗೆ ಮಾಹಿತಿಯು ಲಭ್ಯವಿರುವುದಿಲ್ಲ.<br><br>ಸಾಮಾನ್ಯವಾಗಿ ಗ್ರಾಹಕ ಆಯೋಗಗಳಲ್ಲಿ ಆದೇಶವಾಗಿ, ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯಾಗಿರುವ ಪ್ರಕರಣಗಳು ಹಾಗೂ ಗ್ರಾಹಕ ಆಯೋಗಗಳ ಆದೇಶದ ಕುರಿತು ಅಮಲ್ಜಾರಿ ಅರ್ಜಿ ದಾಖಲಾಗದಿರುವ ಪ್ರಕರಣಗಳಲ್ಲಿ ಗ್ರಾಹಕ ಆಯೋಗಗಳ ಆದೇಶಗಳ ಜಾರಿಯಾಗಿರುತ್ತದೆ. |
| ಇ) | ಗ್ರಾಹಕರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ವಿವರವನ್ನು ಒದಗಿಸುವುದು? | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಲ್ಲಿ ಪ್ರಾರಂಭದಿಂದ ದಿನಾಂಕ: 30.06.2025 ರವರೆಗೆ ದಾಖಲಾಗಿರುವ, ಇತ್ಯರ್ಥಗೊಂಡಿರುವ ಹಾಗೂ ಬಾಕಿಯಿರುವ ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಆನಾಸ 98 ಸಲಫ 2025 (1867126)**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ
ಕಾನೂನು ಮಾಪನಶಾಸ್ತ್ರ, ಸಚಿವರು

72

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 793

## ಅನುಬಂಧ

**ಕಳೆದ 03 ವರ್ಷಗಳಿಂದ ಇಲ್ಲಿಯವರೆಗೂ ಗ್ರಾಹಕರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳು, ಇತ್ಯರ್ಥವಾಗಿರುವ ಪ್ರಕರಣಗಳು ಹಾಗೂ ಬಾಕಿಯಿರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ.**

| ಆಯೋಗದ ಹೆಸರು | ವರ್ಷ | ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ನಮೂದಿಸಿರುವ ಅವಧಿಯಲ್ಲಿ ಬಾಕಿಯಿರುವ ಪ್ರಕರಣಗಳು |
|---|---|---|---|---|
| ರಾಜ್ಯ ಆಯೋಗ (ಮೇಲ್ಮನವಿಗಳು) | 2023 | 2495 | 969 | 1526 |
| | 2024 | 3379 | 565 | 2814 |
| | 2025 | 967 | 33 | 934 |
| | **ಒಟ್ಟು** | **6841** | **1564** | **5274** |
| ರಾಜ್ಯ ಆಯೋಗ (ಫಿರ್ಯಾದುಗಳು) | 2023 | 117 | 47 | 70 |
| | 2024 | 96 | 8 | 88 |
| | 2025 | 29 | 3 | 26 |
| | **ಒಟ್ಟು** | **242** | **58** | **184** |
| ಜಿಲ್ಲಾ ಆಯೋಗ | 2023 | 7231 | 6625 | 606 |
| | 2024 | 8232 | 5341 | 2891 |
| | 2025 | 3569 | 386 | 3183 |
| | **ಒಟ್ಟು** | **19032** | **12352** | **6680** |

**ಗ್ರಾಹಕರ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ.**

| ಆಯೋಗದ ಹೆಸರು | ಪ್ರಾರಂಭದಿಂದ ಜೂನ್ 2025 ರ ಅಂತ್ಯದವರೆಗೆ ದಾಖಲಾದ ಪ್ರಕರಣಗಳು | ಪ್ರಾರಂಭದಿಂದ ಜೂನ್ 2025 ರ ಅಂತ್ಯದವರೆಗೆ ಇತ್ಯರ್ಥವಾಗಿರುವ ಪ್ರಕರಣಗಳು | ಪ್ರಾರಂಭದಿಂದ ಪ್ರಸ್ತುತ ಜೂನ್-2025 ರ ಅಂತ್ಯಕ್ಕೆ ಬಾಕಿಯಿರುವ ಪ್ರಕರಣಗಳು |
|---|---|---|---|
| **ರಾಜ್ಯ ಆಯೋಗ** (ಮೇಲ್ಮನವಿಗಳು) | 66367 | 57831 | 8536 |
| **ರಾಜ್ಯ ಆಯೋಗ** (ಫಿರ್ಯಾದುಗಳು) | 8622 | 7385 | 1237 |
| **ರಾಜ್ಯ ಆಯೋಗ ಒಟ್ಟು** | 74989 | 65216 | 9773 |
| **ಜಿಲ್ಲಾ ಆಯೋಗ** (ಫಿರ್ಯಾದುಗಳು) | **251766** | **244519** | **7247** |